# 'ಅರ್ಥ'ನಿಂದ ಶೀಘ್ರದಲ್ಲಿಯೇ ಆಯುರ್ವೇದ ಆಸ್ಪತ್ರೆ

ಬೆಂಗಳೂರು,೧೭– ನಗರದ ಹೊರವಲಯದ ದೊಡ್ಡಬಳ್ಳಾಪುರ ಭಾಗದಲ್ಲಿ ಶೀಘ್ರದಲ್ಲಿಯೇ ಸುಮಾರು ೨೦೦ ಹಾಸಿಗೆಗಳ ಸುಸಜ್ಜಿತ ಆಯುರ್ವೇದ ಆಸ್ಪತ್ರೆ, ಮತ್ತು ಆಯುರ್ವೇದ ಮೆಡಿಕಲ್ ಕಾಲೇಜ್ ಪ್ರಾರಂಭಿಸಲಿದ್ದೇವೆ ಅದು ನಮ್ಮ ತಂದೆ ತಾಯಿ ಕನಸಾಗಿತ್ತು ಈಗಾಗಲೇ ಸಾಕಷ್ಟು ಕಾರ್ಯ ಮುಗಿಯುತ್ತ ಬಂದಿದೆ ಎಂದು ಪ್ರಶಾಂತ ತಿಳಿಸಿದರು.

ಸಾಂಪ್ರದಾಯಿಕ ಚಿಕಿತ್ಸಾ ವಿಧಾನದ ಮೂಲಕ ಆರೋಗ್ಯಕರ ಜೀವನಕ್ಕೆ ಬದ್ಧವಾಗಿರುವ ಅರ್ಥ ಕಳೆದ ಐದು ವರ್ಷಗಳಿಂದ ವ್ಯಕ್ತಿಗಳ ಆರೋಗ್ಯ ರಕ್ಷಣೆ ಮತ್ತು ಉತ್ತಮ ಜೀವನಕ್ಕೆ ಬದ್ಧವಾಗಿ ಸೇವೆ ಸಲ್ಲಿಸುತ್ತ ಬಂದಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಡಾ.ಪ್ರಶಾಂತ ಆಚಾರ್ಯರವರು ಇಂದು ಹೋಟಲ್ ಅಶೋಕದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಹೇಳಿದರು.

ಪ್ರತಿಯೊಬ್ಬ ವ್ಯಕ್ತಿ ಆರೋಗ್ಯದಿಂದ ಇರಬೇಕು ಅಥವಾ ಆರೋಗ್ಯಕರ ಜೀವನ ನಡೆಸಲು ಸಶಕ್ತನಾಗಿರಬೇಕು ಹಾಗೂ ಸ್ತ್ರೀ–ಪುರುಷರು ಆರೋಗ್ಯವಂತರಾಗಿರಲು ಆರೋಗ್ಯ ಮರಳಿ ಪಡೆಯಲು ಸೂಕ್ತ ಬೆಂಬಲ ನೀಡುವುದೇ ನಮ್ಮ ಸಂಸ್ಥೆಯ ಮೂಲಮಂತ್ರ ಎಂದು ತಿಳಿಸಿದರು.

ಕಳೆದ ಐದು ವರ್ಷಗಳಿಗೂ ಹೆಚ್ಚು ಅವಧಿಯಲ್ಲಿ ವೈವಿಧ್ಯಮಯ ಕಾಯಿಲೆಗಳಿಂದ ಬಳಲುತ್ತಿದ್ದ ಹತ್ತು ಸಾವಿರಕ್ಕೂ ಹೆಚ್ಚು ಜನರ ಕಾಯಿಲೆಗಳನ್ನು ಗುಣಪಡಿಸಲಾಗಿದೆ. ವಿದೇಶಗಳಿಂದಲೂ ಕೂಡ ಇಲ್ಲಿಗೆ ಬಂದು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ.

ಇದೆ ಸಮದರ್ಭದಲ್ಲಿ ಸಂಸ್ಥೆಯ ಸಿಇಒ ರಜತ್ ಗುಪ್ತಾ ಮಾತನಾಡಿ ಸಂಸ್ಥೆ ಅಭಿವೃದ್ಧಿಪಡಿಸಿರುವ ಬೆನ್ನು ನೋವು ಚಿಕಿತ್ಸಾ ವಿಧಾನದ ಫಲಿತಾಂಶ ತುಂಬ ಉತ್ತೇಜನಕಾರಿಯಾಗಿದೆ ಎಂದು ತಿಳಿಸಿದರು.

ಆರೋಗ್ಯವಂತರ ಆರೋಗ್ಯ ನಿರ್ವಹಣೆ ಮತ್ತು ಕಾಯಿಲೆ ಪೀಡಿತರ ರೋಗ ವಾಸಿ ಮಾಡುವುದು ಅರ್ಥದಲ್ಲಿ ಪ್ರತಿಯೊಬ್ಬರಿಗೂ ಅನ್ವಯಿಸುವ ತತ್ವಜ್ಞಾನವಾಗಿದೆ. ಆರೋಗ್ಯದ ಮೂಲ ವಿಜ್ಞಾನವನ್ನು ಆಯುವೇರ್ಧ ಎನ್ನುತ್ತಾರೆ. ಇದೊಂದು ಭಾರತದ ಸಾಂಪ್ರದಾಯಿಕ ಆರೋಗ್ಯ ರಕ್ಷಣೆ ವ್ಯವಸ್ಥೆಯಾಗಿದೆ.

***